ಅಸಲು ದಾವಾ ಸಂಖ್ಯೆ . 34/2018

ಪಿ.ಡಬ್ಲ್ಯೂ-01
ದಿಃ 20-11-2021
ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀ ಸವಾಲು 1 ನೇ ಪ್ರತಿವಾದಿ ಪರ ಶ್ರೀ ಜಿ ಎಸ್ ಆರ್ ವಕೀಲರಿಂದ ಃ-

ನನಗೆ ಕನ್ನಡ ಓದಲು, ಬರೆಯಲು ಬರುತ್ತದೆ . ನನ್ನ ತಂದೆಯ ಹೆಸರು ಸಯ್ಯದ್ ಅಮೀರ್ ಖಾನ್ . ಅವರ ತಂದೆಯ ಹೆಸರು ಸಯ್ಯದ್ ಸಾಲಾದ್ . ನನ್ನ ತಾಯಿಯ ಹೆಸರು ಪುತೇಜಾ ಬೀ. ನನ್ನ ತಂದೆಯ ತಾಯಿಯ ಹೆಸರು ಮೆಹಬೂಬ್ ಉನ್ನಿಸಾ. ನನ್ನ ತಂದೆಗೆ ನಾವು ಮೂವರು ಹೆಣ್ಣು ಮಕ್ಕಳು . ಇಬ್ಬರು ಗಂಡು ಮಕ್ಕಳು . ನಿಪಿ 1 ರ ನನ್ನ ಗಂಡನ ವಂಶವೃಕ್ಷ ಎಂದರೆ ಸರಿ . ನಾನು ನನ್ನ ತಂದೆಯವರು ವಂಶವೃಕ್ಷ ಸಲ್ಲಿಸುವುದನ್ನು ಹೊರತುಪಡಿಸಿ , ಗಂಡನ ಕಡೆಯ ವಂಶವೃಕ್ಷ ವನ್ನು ಸುಳ್ಳಿನಿಂದ ಸಲ್ಲಿಸಿರುತ್ತೇನೆಂದರೆ ಸರಿಯಲ್ಲ. ನನ್ನ ಗಂಡನ ತಂದೆಯ (ಮಾವ ) ಹೆಸರು ಅಬ್ದುಲ್ ರಸುಲ್ ಸಾಬ್ .

ಸೈಯ್ಯದ್ ಹಯಾಸ್ ಸಾಬ್ ಯಾರು ಎಂಬ ಪ್ರಶ್ನೆಗೆ ನನ್ನ ತಾಯಿಯ ಅಪ್ಪ ಎಂದರು. ನಿಪಿ 1 ರಲ್ಲಿ ನಮೂದಿರುವ 6 ನೇ ವಾರಸುದಾರರು ನನ್ನ ಯಜಮಾನರು ನಿಸಾರ್ ಅಹಮ್ಮದ್ ಎಂದರೆ ಸರಿ . ನಿಪಿ 1 ನನ್ನ ತಾಯಿಯ ಕುಟುಂಬದ ವಂಶವೃಕ್ಷ ಆಗಿರುತ್ತದೆ. ನನ್ನ ತಾಯಿಯ ಕುಟುಂಬದ ಸದಸ್ಯರಲ್ಲಿ ನನ್ನ ಗಂಡನ ಹೆಸರು ಬರಬಾರದಿತ್ತು ಎಂದರೆ ಸರಿ . ನ್ಯಾಯಾಲಯಕ್ಕೆ ಸಲ್ಲಿಸಿರುವ ಪ್ರಮಾಣ ಪತ್ರದ ಎಲ್ಲಾ ವಿಚಾರಗಳು ನನಗೆ ಗೊತ್ತಿರುತ್ತದೆ. .

ನನ್ನ ತಾಯಿಯ ತಂದೆಗೆ ಸರ್ವೆ ನಂ 87 ರಲ್ಲಿ ನನಗೆ 2 ಎಕರೆ ಕೊಟ್ಟಿರುತ್ತಾರೆ . ಸರ್ವೆ ನಂ 60 ರಲ್ಲಿ 2 ¼ ಗುಂಟೆ ನನಗೆ ಬಂದಿರುತ್ತದೆ. ನಿಪಿ 7 ನೋಂದಣಿ ಆಗಿರುವುದಿಲ್ಲ ಎಂದರೆ ಸರಿ. 1985 ಇಸವಿಯಲ್ಲಿ ನನ್ನ ತಂದೆಯವರಿಗೆ ಎಷ್ಟು ಜಮೀನು ಇತ್ತು ಎಂದು ತೋರಿಸಲು ನಾನು ದಾಖಲಾತಿಯನ್ನು ಹಾಜರುಪಡಿಸಿರುವುದಿಲ್ಲ. ನಿಪಿ 7 ರ ದಾಖಲೆಯನ್ನು ನಾನು ಸೃಷ್ಟಿ ಮಾಡಿರುತ್ತೇನೆಂದರೆ ಸರಿಯಲ್ಲ. ನನ್ನ ತಂದೆಗೆ ರಿ ಸರ್ವೆ ನಂ 60 ರಲ್ಲಿ ಯಾವುದೇ ಆಸ್ತಿ ಇರುವುದಿಲ್ಲ ಎಂದು ಸೂಚಿಸಿದರೆ ಸರಿಯಲ್ಲ.

ನಿಪಿ 4 ರ ದಾಖಲೆಯ ಪ್ರಕಾರ ಸರ್ವೆ ನಂ 60 ರಲ್ಲಿ ಕೇವಲ 19 ಗುಂಟೆ ಮಾತ್ರ ಇದೆ ಎಂದರೆ ಸರಿ . ನಿಪಿ 7 ರಲ್ಲಿ ಹೇಳಿರುವ ಸರ್ವೆ ನಂ 60 ರ ಜಮೀನು ನನ್ನ ಕುಟುಂಬಕ್ಕೆ

ಸೇರಿರುವುದಲ್ಲ ಎಂದು ಸೂಚಿಸಿದರೆ ಸರಿಯಲ್ಲ. ಸದರಿ ಜಮೀನಿಗೆ ಸಂಬಂಧಪಟ್ಟಂತೆ ನನ್ನ ಬಳಿ ಯಾವುದೇ ದಾಖಲೆ ಇದೆಯಾ ಎಂಬ ಪ್ರಶ್ನೆಗೆ ಇದೆ ಅದನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ ಎಂದರು . ನಿಪಿ 7 ನ್ನು ನಾನು ಸೃಷ್ಟಿ ಮಾಡಿರುತ್ತೇನೆಂದರೆ ಸರಿಯಲ್ಲ. ನಾನು ಕರ್ಕುಚ್ಚಿ ಗ್ರಾಮದಲ್ಲಿ ವಾಸವಿದ್ದೇನೆ. ಸರ್ವೆ ನಂ 60 ರ ಜಮೀನು ದಿಡಗೂರು-ಹರಳಹಳ್ಳಿ ಗ್ರಾಮದಲ್ಲಿದೆ. ನನ್ನ ವಾಸದ ಮನೆಗೂ , ಜಮೀನಿಗೂ ಸುಮಾರು 90 ಕಿ.ಮೀ ಇರಬಹುದು .

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

ಸಿಸಿ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ
ಹೊನ್ನಾಳಿ.